## ಕಳೆದ ಸಂಚಿಕೆಯಲ್ಲಿ



ನಾಗತಿಹಳ್ಳಿ ಚಂದ್ರಶೇಖರ್ ಅವರನ್ನು ಭೇಟಿಯಾದ ಲಿಂಗನಗೌಡ ಪಾಟೀಲರು ತಮ್ಮ ಮನಸ್ಸಿನಲ್ಲಿದ್ದ ಗೊಂದಲವನ್ನೆಲ್ಲ ಕಳೆದುಕೊಂಡು ಸುಮಿ ಮತ್ತು ಪ್ರೀತಂನ ಮದುವೆಗೆ ಒಪ್ಪಿದರು. ಕಥೆಗಾರನ ಸಮ್ಮುಖದಲ್ಲಿ ಅವರೊಳಗಿನ ಮಗು ಹೊರಬಂದು, ಜಾತಿಯ ಗೋಡೆಯಿಂದ ಹೊರಬರುವುದು ಅವರಿಗೆ ಸಾಧ್ಯವಾಗಿತ್ತು. ಆದರೆ, 'ಮನೆತನದ ಮರ್ಯಾದೆ'ಯ ನೆಪದಲ್ಲಿ ತಮ್ಮ ಮಗ ವಿರುಪಾಕ್ಷಿ ತಂಗಿಯ ಪ್ರೇಮಕ್ಕೆ ಸುಲಭಕ್ಕೆ ಸಮ್ಮತಿಸುವುದಿಲ್ಲ ಎನ್ನುವುದು ಅವರಿಗೆ ಗೊತ್ತಿತ್ತು. ವಿರುಪಾಕ್ಷಿ ಸ್ವಭಾವತಃ ಒಳ್ಳೆಯವನಾದರೂ ಚನ್ನೇಶನ ಸಹವಾಸದಲ್ಲಿ ಒರಟುತನ, ಹುಸಿಪ್ರತಿಷ್ಠೆ ಮೈಗೂಡಿಸಿಕೊಂಡಿದ್ದ. ಸುಮಿ–ಪ್ರೀತಂ ಪ್ರೇಮ ಹೊಸ ಆಯಾಮವನ್ನು ಪಡೆದುಕೊಳ್ಳುತ್ತಿರುವ ಸಂದರ್ಭದಲ್ಲೇ ಕಾರವಾರದಲ್ಲಿ ಪ್ರೀತಂನ ತಾಯಿ ಮಗನ ಹಂಬಲದಲ್ಲಿ ಕೊರಗತೊಡಗಿದಳು. ಆಕೆಯನ್ನು ಭೇಟಿಯಾದ ಪ್ರೀತಂನ ಗೆಳೆಯರು, ಮಗ ಫಿಲ್ಮ್ ಸ್ಟಾರ್ ಆಗುತ್ತಿರುವ ಸುದ್ದಿಯನ್ನು ತಾಯಿಯೊಂದಿಗೆ ಆಚರಿಸಲು ಮುಂದಾದರು. ಸಂಘರ್ಷದ ಸಮಯದಲ್ಲೇ ಸಂಭ್ರಮವೂ ಕುಡಿಯೊಡೆದಿತ್ತು.

ಪ್ರಚೋದಿತಳಾಗಿ ಅವನ ಕೆನ್ನೆ ಗಲ್ಲವನ್ನು ತುಸು ಉನ್ಮತ್ತಳಾಗಿಯೇ ಚುಂಬಿಸಿದಳು. ಪ್ರೀತಂನ ಮೈ ಬಿಸಿಯಾಗುತ್ತಿದ್ದರೂ ಸಾರ್ವಜನಿಕ ಸ್ಥಳ ಎಂಬುದರ ಜಾಗ್ರತ ಮನಸ್ಥಿತಿಯಲ್ಲಿ ತುಸು ಹಿಂಜರಿಕೆಯಿಂದಲೇ ಅದನ್ನೆಲ್ಲಾ ಸ್ವೀಕರಿಸುತ್ತಿದ್ದ. ಸುಮಿ ಮೈ ಭಾರವನ್ನು ಅವನ ಎದೆಗಾನಿಸಿ ಅವನ ತುಟಿಗಳನ್ನು ತನ್ನ ತುಟಿಗಳಲ್ಲಿ ಬೆಸೆದ ನಶೆಯಲ್ಲಿ ಕಣ್ಣುಮುಚ್ಚಿದ್ದಳಷ್ಟೇ. ಪ್ರೀತತತತತತಂ ಎಂದು ಚೀರಿ ತನ್ನ ದೇಹದ ಭಾರವನ್ನು ಪೂರ್ತಿ ಸಡಿಲುಬಿಟ್ಟಳು. ತಕ್ಷಣವೇ ಪ್ರೀತಂನ ಬಲಿಷ್ಠ ತೋಳುಗಳು ಅವಳ ಬೆನ್ನಿಗಾನಿಸಿ ಹಿಡಿದು, ಅವಳು ನಿಂತಲ್ಲೇ ಧೊಪ್ಪೆಂದು ನೆಲಕ್ಕೊರಗುವುದನ್ನು ತಡೆದವು. ಪ್ರೀತಂ ಕಂಗಾಲಾದ. ಹಗುರ ಅಡ್ಡಾಗಿಸಿ ತನ್ನ ತೊಡೆಯ ಮೇಲೆ ಅವಳ ತಲೆ ಇಟ್ಟು ಸುಮಿ ಸುಮಿ ಎಂದು ಗಲ್ಲವನ್ನು ತಟ್ಟಿದ. ಸುಮಿಯ ಬ್ಯಾಗಲ್ಲಿ ತಡಕಾಡಿ ನೀರಿನ ಬಾಟಲು ತೆಗೆದು ಮುಖಕ್ಕೆ ಚಿಮುಕಿಸಿದ. ನ್ಯೂಸ್ ಪೇಪರ್ ತೆಗೆದು ಗಾಳಿ ಹಾಕಿದ. ಕುತ್ತಿಗೆ ಸುತ್ತ ಒಂದೆರಡು ಬಟನ್ನುಗಳನ್ನು ತೆಗೆದು ಡ್ರೆಸ್ ಸಡಿಲಿಸಿದ. ಶೈಲತ್ತೆಗೆ ಫೋನ್ ಹಚ್ಚಬೇಕೆಂದು ಮೊಬೈಲ್ ತಡಕಾಡುವಾಗ ಸುಮಿ ತಟ್ಟನೆ ಕಣ್ಬಿಟ್ಟು ಅವನ ಕೈಗಳನ್ನು ಗಟ್ಟಿಯಾಗಿ ಹಿಡಿದಳು. ಅವನ ಮೈ ಮುಖ ತಲೆ ಸವರುತ್ತಾ 'ನಿಂಗೇನು ಪೆಟ್ಟಾಗಿಲ್ಲ ತಾನೆ?' ಎಂದಳು. 'ನಂಗೇನಾಗಿಲ್ಲ ಸು...' ಎಂದು ಅವಳ ಹಣೆಗಂಟಿದ ಮುಂಗುರುಳನ್ನು ಹಿಂದೆ ಸರಿಸಿದ.

ಸ್ವಲ್ಪ ಸಮಾಧಾನ ಆದ ಮೇಲೆ ಸುಮಿ ಎದ್ದು ಕುಳಿತಳು. ಸ್ವಲ್ಪ ಹೊತ್ತು ಇಬ್ಬರು ಮೌನವಾದರು. ನಿಧಾನ ಮೇಲೆದ್ದು ಮೇನ್ ಗೇಟಿನತ್ತ ಹೆಜ್ಜೆ ಹಾಕಿದರು. ಪರಸ್ಪರ ಆಸರೆಯಲ್ಲಿ ಸಾತ್ ಗುಂಬಜುಗಳನ್ನು ದಾಟುವಾಗ ಅವರಿಗೆ ಮಾತು ಬೇಕಿರಲಿಲ್ಲ.

ಅಪ್ಪುಗೆ, ಚುಂಬನದಂಥ ಪ್ರೇಮಾಭಿವ್ಯಕ್ತಿಯ ಗಳಿಗೆಯಲ್ಲಿ ಸುಮಿ ಸ್ಮೃತಿ ತಪ್ಪುವುದಕ್ಕೆ ಕಾರಣ ಸ್ಪಷ್ಟವಾಗತೊಡಗಿತ್ತು. ಕಾರವಾರದ ಕಡಲ ತೀರದಲ್ಲಿ ಇಬ್ಬರೂ ಪ್ರೇಮದಾಲಿಂಗನದಲ್ಲಿ ಮೈಮರೆತಿರುವಾಗ ಪ್ರೀತಂನ ತಲೆಗೆ ಬಿದ್ದ ಪೆಟ್ಟು ಸುಮಿಗೆ ಮರೆಯಲಾಗದಂಥ ಮಾನಸಿಕ ಆಘಾತಕ್ಕೆ ಕಾರಣವಾಗಿದೆ. ಆ ಅನಿರೀಕ್ಷಿತ ಘಟನೆ ಅವಳ ಸುಪ್ತಪ್ರಜ್ಞೆಯಲ್ಲಿ ಆಳವಾದ ಗಾಯವನ್ನು ಗೀರಿದೆ. ಅಂಥದ್ದೇ ಪ್ರೇಮೋನ್ಮಾದದ ಸನ್ನಿವೇಶದಲ್ಲಿ ಅವಳ ನೆನಪಿನ ಕೋಶಗಳಲ್ಲಿ ಮತ್ತೆ ಆಘಾತದ ಜ್ವಾಲೆ ಹೊತ್ತಿಕೊಳ್ಳುವುದೇ ಹೀಗೆ ಪ್ರಜ್ಞೆ ತಪ್ಪಲು ಕಾರಣವಿರಬಹುದು. ಅವರ ಈ ಅರಿವಿಗೆ ಪರಸ್ಪರ ಚರ್ಚೆಯ ಅಗತ್ಯವೂ ಬರಲಿಲ್ಲ. ಸಕಾರಣವನ್ನು ಮೌನದಲ್ಲೇ ಮನಗಂಡಿದ್ದರು. ಅದನ್ನು ಪಾರು ಮಾಡಬೇಕಾದ ಪರಿಯನ್ನೂ ಎಳೆಯ ಮನಸ್ಸುಗಳು ಪ್ರಬುದ್ಧವಾಗಿಯೇ ಚಿಂತಿಸತೊಡಗಿದ್ದವು. ಬೆಸೆದ ಬೆರಳುಗಳಿಂದಲೇ ಪರಸ್ಪರ ಸಂತೈಸಿಕೊಳ್ಳುತ್ತಾ ಬರುತ್ತಿರುವ ಜೋಡಿಗಳನ್ನು ದೂರದಲ್ಲಿ ಕಂಡಾಗ ಶೈಲತ್ತೆಯ ಕಣ್ಣುಗಳು ಆ ಬಿರುಬಿಸಿಲಲ್ಲೂ ತಂಪಾದವು. ಜಗತ್ತಿನಲ್ಲಿ ಅತ್ಯಂತ ಸುಂದರ ದೃಶ್ಯವೊಂದಿದ್ದರೆ ಅದು ಪ್ರೇಮಿಗಳನ್ನು ಸುಮ್ಮನೇ ನೋಡುವುದು, ವಿಶೇಷವಾಗಿ ಹೊಸ ಪ್ರೇಮಿಗಳನ್ನು, ಅದರಲ್ಲೂ ಕಿಶೋರ ಪ್ರೇಮಿಗಳನ್ನು, ಎನಿಸಿತು ಅವಳಿಗೆ! ಈ ಜೋಡಿ ಹಸನಾಗಿರಲಿ, ಜೀವನವಿಡೀ ಜೊತೆಗಿರಲಿ ಎಂದು ಮನಸ್ಸಲ್ಲೇ ಹಾರೈಸಿದಳು. ಅವರು ಹತ್ತಿರವಾಗುತ್ತಿದ್ದಂತೆಯೇ ತಲೆಯಲ್ಲಿ ಸುಳಿದ ಒಂದು ವಿಚಾರ ಅವಳಲ್ಲಿ ಮಿಂಚು ಮೂಡಿಸಿತು – ಪ್ರೀತಂ ಮತ್ತು ಸುಮಿಗೆ ತಕ್ಷಣ ಮದುವೆ ಮಾಡಿಸಬೇಕು!

ಶೈಲತ್ತೆ ಪ್ರೀತಂ ಮತ್ತು ಸುಮಿ ಎದುರು ಬಂದು ನಿಂತಾಗಲೂ ತನ್ನೊಳಗೇ ಇದ್ದಳು. 'ಇದೇನ್ ಶೈಲತ್ತೆ, ಕನಸು ಕಾಣಾಕ್ ಹತ್ತಿ. ಹುಸೇನ್ ಜತಿ ಇಲ್ಲೆಲ್ಲ ಅಡ್ಡಾಡಿದ್ದು ನೆನಪಾಯ್ತೇನು?' ಎಂದು ಸುಮಿ ಅವಳ ಭುಜ ಅಲುಗಾಡಿಸಿ ಕೇಳಬೇಕಾಯ್ತು. ಆಗಲೂ ಗಂಭೀರವಾಗಿಯೇ ಇದ್ದಳು. ಸದಾ ಹಸನ್ಮುಖಿ ಶೈಲತ್ತೆಯನ್ನು ಇಷ್ಟೊಂದು ಗಂಭೀರ ಮುಖಭಾವದಲ್ಲಿ ಕಾಣುವುದು ಇಬ್ಬರಿಗೂ ಅಸಹಜವಾಗಿ ಕಾಣುತ್ತಿತ್ತು. 'ತೀಸರಾ ಗುಂಬಜ್ ಗೋಡೆ ಮೇಲೆ ಶೈಲು–ಹುಸ್ಸೈನ್ ಅಂತ ಹೆಸರು ಕೊರೆದದ್ದು ಕಂಡೆ' ಎಂದು ಪ್ರೀತಂ ಸನ್ನಿವೇಶವನ್ನು ಹಗುರಗೊಳಿಸಲು ಪ್ರಯತ್ನಿಸಿದ. 'ಆ ಹುಸೇನಿ ಶಾದಿ ದಫ್ತರಿನಲ್ಲಿ ಹೆಸರು ಬರೆಸಿದ್ದರೆ ನಾವು ದಂಪತಿಗಳಾಗಿ ಇರುತ್ತಿದ್ದವೇನೋ' ಎಂದು ಜೋರಾಗಿ ನಕ್ಕಳು. 'ಈಗ ನನ್ನ ಮತ್ತು ಪ್ರೀತಂ ಹೆಸರಾದರೂ ದಂಪತಿಗಳಾಗಿ ಬರೆಸಿಬಿಡು, ಶೈಲತ್ತೆ' ಎಂದು ಸುಮಿಯೂ ಅಷ್ಟೇ ಜೋರಾಗಿ ನಕ್ಕಳು. 'ನಿನ್ನ ಬಾಯಾಗ್ ಬೆಲ್ಲ ಇರಲಿ. ನನ್ನ ಮನಸಲ್ಲಿದ್ದದನ್ನೇ ಅಂದಿಯಲ್ಲವ್ವ' ಎಂದು ಅವಳನ್ನು ಅಪ್ಪಿಕೊಂಡಳು.

### 8

### ಘಟ್ಟದ ಮೇಲಿನ ನೆಲ್ಲಿಕಾಯಿ,
### ಸಮುದ್ರ ದೊಳಗಿನ ಉಪ್ಪು

ಮನಸ್ಸುಗಳು ಒಂದಾದ ಮೇಲೆ ಮದುವೆ ಎನ್ನುವುದು ಬರೀ ಒಂದು ಲೌಕಿಕ ವ್ಯವಹಾರ ಎನ್ನುವುದು ಶೈಲತ್ತೆಗೂ ಗೊತ್ತಿತ್ತು. ಪ್ರೀತಂ ಮತ್ತು ಸುಮಿಯರ ಪ್ರೇಮದ ರುಜುವಾತಿಗೆ ವಿವಾಹದ ಹಂಗಿಲ್ಲ ನಿಜ. ಆದರೆ ಅದೆಷ್ಟೋ ಬಾರಿ ವಿವಾಹದ ನಂತರ ಪ್ರೇಮವಿರೋಧಿ ಶಕ್ತಿಗಳು ದುರ್ಬಲಗೊಳ್ಳುವುದನ್ನು ಅವಳು ಕತೆಗಳಲ್ಲೂ ಸಿನಿಮಾಗಳಲ್ಲೂ ಮತ್ತು ಸಮಾಜದಲ್ಲೂ ಕಂಡಿದ್ದಳು. ಒಮ್ಮೆ ಮದುವೆ ಅಧಿಕೃತವಾಗಿ ದಾಖಲಾಗಿ ಸಂಬಂಧ ಕಾನೂನುಬದ್ಧವಾದರೆ ಲಿಂಗನಗೌಡ ಪಾಟೀಲರ ಘನಕುಟುಂಬ ಹಲ್ಲೆ ಅಥವಾ ಕೊಲೆಯಂಥ ಅಪರಾಧಕ್ಕೆ ಕೈಹಚ್ಚಲಾರದು. ಹಗೆ, ದ್ವೇಷ ಸಾಧನೆ ಆ ಕುಟುಂಬದ ವಂಶವಾಹಿನಿಯಲ್ಲೇ ಇರುವುದು ನಿಜವಾದರೂ ಈ ಜಮಾನಾದಲ್ಲಿ ಹಾಗೆ ಮಾಡಿ ತಪ್ಪಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಅಂಥ ದುಸ್ಸಾಹಸಕ್ಕಿಳಿದರೆ ಸರಕಾರಿ ಸೇವೆಯಲ್ಲಿರುವ ವಿರುಪಾಕ್ಷಿ ಜೈಲು ಕಂಬಿ ಎಣಿಸಬೇಕಾಗುತ್ತದೆ. ಪ್ರೀತಂ ಮತ್ತು ಸುಮಿ ಇಬ್ಬರ ವಯಸ್ಸು ಕಾನೂನುಬದ್ಧವಾಗಿ ಮದುವೆಗೆ ತೊಡಕಿಲ್ಲವಾದರೂ, ಸಂಸಾರಕ್ಕೆ ಪಕ್ವಗೊಂಡ ವಯಸ್ಸಲ್ಲ ಎಂಬುದು ಶೈಲತ್ತೆಗೆ ತಿಳಿಯದ್ದೇನಲ್ಲ. ಇಬ್ಬರೂ ಟೀನ್ ಏಜ್‌ಗಳು. ಸುಮಿಗೆ ಮೊನ್ನೆ ಮೊನ್ನೆ ಯುಗಾದಿಗೆ ಹದಿನೆಂಟು ತುಂಬಿದೆ. ಪ್ರೀತಂನ ನಿಜವಾದ ವಯಸ್ಸು ಹತ್ತೊಂಬತ್ತು ಎನ್ನುವುದು ಅವಳಿಗೆ ಗೊತ್ತಿತ್ತು. ಆದರೆ ಅದು ಹೇಗೋ ಅವನ ಜನ್ಮ ದಾಖಲೆಗಳ ಪ್ರಕಾರ ವಯಸ್ಸು ಇಪ್ಪತ್ತೊಂದು ಆಗುತ್ತದಂತೆ. ಅದನ್ನು ಸುಮಿಯೇ ಒಮ್ಮೆ ಹೇಳಿದ್ದಳು. ಅದು ಒಳ್ಳೆಯದೇ ಆಯಿತು. ಸಬ್ ರಿಜಿಸ್ಟ್ರಾರ ಕಾರ್ಯಾಲಯದಲ್ಲಿ ಅವರ ಮದುವೆ ದಾಖಲಿಸಲು ಅನುಕೂಲವಾಯ್ತು. ಹಾಗಂತ ಅವರು ಈಗಲೇ ಗಂಡ ಹೆಂಡತಿಯರಂತೆ ಜೊತೆಯಲ್ಲಿರಬೇಕಾಗಿಲ್ಲ. ಅದು ಸಾಧುವೂ ಅಲ್ಲ. ಅವರು ಸಾಧಿಸುವುದು ಸಾಕಷ್ಟಿದೆ. ವಿದ್ಯಾಭ್ಯಾಸ ಪೂರ್ತಿಗೊಳಿಸಲಿ. ತಮ್ಮ ಕಾಲ ಮೇಲೆ ನಿಂತು